**ಓ ಎಸ್  9/2021 ಡಿಡಬ್ಲ್ಯೂ 1**

**ಸಾಕ್ಷಿಯನ್ನು ದಿಃ  02.12.2025 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ವಾದಿ ಪರ ಶ್ರೀ  ಎಂ ಎಸ್  ವಕೀಲರಿಂದಃ**

ಒಳಚರಂಡಿ ವ್ಯವಸ್ಥೆಗೆ ಭೂಸ್ವಾಧೀನಗೊಂಡಿರುವ ಸ್ವತ್ತುಗಳು ನಮ್ಮ ತಾಯಿಯ 0.15 ಗುಂಟೆ ಜಮೀನಿನ ಪೂರ್ವಕ್ಕೆ ಬರುತ್ತದೆ ಎಂದರೆ ಸರಿಯಲ್ಲ. ಒಳಚರಂಡಿ ವ್ಯವಸ್ಥೆಗೆ ಭೂಸ್ವಾಧೀನಗೊಂಡಿರುವ ಒಟ್ಟು 5 ಎಕರೆ ಜಮೀನಿನಲ್ಲಿ ನಮ್ಮ ತಂದೆಯ ಹೆಸರಿನಲ್ಲಿರುವ ಜಮೀನು ಭೂಸ್ವಾಧೀನಗೊಂಡಿರದೆ ನಮ್ಮ ತಾಯಿ ಜಮೀನಿನ ಪೂರ್ವಕ್ಕೆ ಆದಂತೆ ಇರುವ ಜಮೀನು ಭೂಸ್ವಾಧೀನಗೊಂಡಿದೆ ಎಂದರೆ ಸರಿಯಲ್ಲ.  ವಾಸ್ತವವಾಗಿ ಯಾವ ಜಮೀನು ಭೂಸ್ವಾಧೀನಗೊಂಡಿದೆ ಎಂದು ತಿಳಿಯುವ ಬಗ್ಗೆ ವಾದಿಯು ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ ಮಂಡ್ಯರವರಿಗೆ ದೂರು ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ದೂರಿನ ಆಧಾರದ ಮೇಲೆ ವರದಿ ಸಲ್ಲಿಸುವಂತೆ ಪಾಂಡವಪುರ ಉಪ ವಿಭಾಗಾಧಿಕಾರಿಗಳಿಗೆ ಸೂಚನೆ ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಅದರ ಅನುಸಾರ ಉಪ ವಿಭಾಗಾಧಿಕಾರಿಗಳು ಸ್ಥಳ ತನಿಖೆ ಮಾಡಿ ಸರ್ವೆ ನಂ. 72/1 ರಲ್ಲಿ ಸಿ ಕೆ ದೇವೇಗೌಡರ ಹೆಸರಿನಲ್ಲಿ 0.24 ಗುಂಟೆ ಜಮೀನು ಭೂಸ್ವಾಧೀನಗೂಂಡಿಲ್ಲವೆಂದು ಮತ್ತು ಆ ಜಮೀನು ಅವರ ಸ್ವಾಧೀನದಲ್ಲಿಯೇ ಇದೆ ಎಂದು ದಿನಾಂಕ 05.08.2025 ರಂದು ವರದಿ ನೀಡಿದ್ದಾರೆ ಎಂದರೆ ಸರಿಯಲ್ಲ.  ಸಾಕ್ಷಿಯು ಮುಂದುವರಿದು ಅದೇ ಉಪ ವಿಭಾಗಾಧಿಕಾರಿಯವರು ಸುಮಾರು 4-5 ತಿಂಗಳಹಿಂದೆ ಸಿ ಕೆ ದೇವೇಗೌಡರ ಹೆಸರಿನಲ್ಲಿನ 0.24 ಗುಂಟೆ ಜಮೀನು ಭೂಸ್ವಾಧೀನಗೊಂಡಿದೆ ಎಂದು ದೃಢೀಕರಣ ಪತ್ರ ನೀಡಿದ್ದಾರೆ ಎಂದು ಹೇಳುತ್ತಾರೆ. ಸದರಿ ದೃಢೀಕರಣ ಪತ್ರವು ವಾಸ್ತವ ಸಂಗತಿಗಳಿಗೆ ವಿರುದ್ಧವಾದ ಮತ್ತು ನನ್ನ ಪ್ರಭಾವ ಬಳಸಿ ಸೃಷ್ಟಿಸಿಕೊಂಡ ದಾಖಲೆ ಎಂದರೆ ಸರಿಯಲ್ಲ.

ನಾನು ಮತ್ತು ನನ್ನ ಚಿಕ್ಕಪ್ಪ ನಾಗರಾಜೇಗೌಡ ಚೆನ್ನಾಗಿದ್ದೇವೆ ಎಂದರೆ ಸರಿಯಲ್ಲ. ನನ್ನ ಚಿಕ್ಕಪ್ಪ ನಾಗರಾಜೇಗೌಡರು ದಿನಾಂಕ 20.06.2020 ರಂದು ನನಗೆ, ವಾದಿಗೆ ಮತ್ತು ನನ್ನ

ತಾಯಿಗೆ ನಿಶಾನೆ ಪಿ 15 ರೀತ್ಯಾ ನೋಟೀಸು ನೀಡಿದ್ದರು ಎಂದರೆ ಸರಿ. ಆ ನೋಟೀಸಿಗೆ ನಾನು ಮರು ಉತ್ತರ ನೀಡಿದ್ದೆನೋ ಅಥವಾ ಇಲ್ಲವೋ ನನಗೆ ನೆನಪಿಲ್ಲ. ನಾನು ಹಾಗೂ ನನ್ನ ಚಿಕ್ಕಪ್ಪ ಇಬ್ಬರು ಷರೀಕ್ಕಾಗಿ ಆ ನೋಟೀಸನ್ನು ನೀಡಿದ್ದೆವು ಎಂದರೆ ಸರಿಯಲ್ಲ. ಆ ಕಾರಣದಿಂದಾಗಿಯೇ ಆ ನೋಟೀಸಿಗೆ ನಾನು ಮರು ಉತ್ತರ ನೀಡಿಲ್ಲ ಎಂದರೆ ಸರಿಯಲ್ಲ. ನಾನು ಹಾಗೂ ನನ್ನ ಚಿಕ್ಕಪ್ಪ ಹಿಂದೆಯೂ ಚೆನ್ನಾಗಿದ್ದೆವು ಈಗಲೂ ಚೆನ್ನಾಗಿದ್ದೇವೆ ಎಂದರೆ ಸರಿಯಲ್ಲ. ನಾನು ಹಾಗೂ ನನ್ನ ಚಿಕ್ಕಪ್ಪ ಪರಸ್ಪರ ಷರೀಕ್ಕಾಗಿ ಕೆಲವೊಮ್ಮೆ ವಿಭಾಗವು 1986 ರಲ್ಲಿ ಆಗಿದೆ ಎಂದು ನಾನು ಮತ್ತು ಕೆಲವೊಮ್ಮೆ 1984 ರಲ್ಲಿ ವಿಭಾಗವಾಗಿದೆ ಎಂದು ನನ್ನ ಚಿಕ್ಕಪ್ಪ ಹೇಳಿಕೊಂಡು ಬಂದಿದ್ದೇವೆ ಎಂದರೆ ಸರಿಯಲ್ಲ. 1984 ಮತ್ತು 1986 ರಲ್ಲಿ ಬೇರೆ ಬೇರೆ ಆಸ್ತಿಗಳಿಗೆ ಎರಡು ಪಾಲುಪಟ್ಟಿಗಳಾಗಿವೆ. ಎಲ್ ಎ ಸಿ 4/2013 ರ ಪ್ರಕರಣದಲ್ಲಿ ಎಲ್ಲಿಯೂ ಸಹ 1984 ರಲ್ಲಿ ವಿಭಾಗ ಆಗಿದೆ ಎಂದು ನಾನು ಹೇಳಿಲ್ಲ ಎಂದರೆ ನನಗೆ ಗೊತ್ತಿಲ್ಲ, ಆ ಕೇಸನ್ನು ನನ್ನ ತಂದೆ ನೋಡಿಕೊಳ್ಳುತ್ತಿದ್ದರು. ನಮ್ಮ ಕುಟುಂಬದಲ್ಲಿ ಆಗಿರುವ ಎಲ್ಲಾ ವ್ಯವರಣೆಗಳು ನನಗೆ ಗೊತ್ತಿದ್ದರೂ ಸಹ ಕೆಲವೊಂದು ನನಗೆ ಗೊತ್ತಿಲ್ಲ, ಕೆಲವೊಂದು ಮರೆತಿದ್ದೇನೆ ಎಂದು ನನ್ನ ಅನುಕೂಲಕ್ಕೆ ತಕ್ಕ ಹಾಗೆ ಉತ್ತರಿಸುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರಿಕೆಯಲ್ಲಿ ಹೇಳಿರುವ ಹಾಗೆ 1984 ರಲ್ಲಿ ನನ್ನ ತಂದೆ, ನನ್ನ ಚಿಕ್ಕಪ್ಪಂದಿರು ಹಾಗೂ ಅಜ್ಜ ಮತ್ತು ಅಜ್ಜಿಯ ನಡುವೆ ಮತ್ತು 1986 ರಲ್ಲಾಗಲೀ ನನ್ನ ತಂದೆ, ನನ್ನ ಚಿಕ್ಕಪ್ಪಂದಿರು ಹಾಗೂ ಅಜ್ಜ ಮತ್ತು ಅಜ್ಜಿಯ ನಡುವೆ ಯಾವುದೇ ವಿಭಾಗ ಪತ್ರ ಆಗಿಲ್ಲ ಎಂದರೆ ಸರಿಯಲ್ಲ.

ವಾದಿಯು ತನ್ನ ಎಲ್ಲಾ ವ್ಯವಹರಣೆಗಳ ದಾಖಲೆಗಳಿಗೆ ಸಹಿ ಮಾಡುತ್ತಿದ್ದರೆಯೇಹೊರತು ಹೆಬ್ಬೆಟ್ಟಿನ ಗುರುತು ಹಾಕುತ್ತಿರಲಿಲ್ಲ ಎಂದರೆ ಎರಡೂ ಮಾಡುತ್ತಿದ್ದರು. ನಿಶಾನೆ ಡಿ 22 ರಲ್ಲಿನ ಪಂಚಾಯಿತಿ ಪಾಲುಪಟ್ಟಿಯನ್ನು ನಾವು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ನಿಶಾನೆ ಡಿ 22 ರಲ್ಲಿ ವಾದಿಯು ತನ್ನ ಹೆಬ್ಬೆಟ್ಟಿನ ಗುರುತನ್ನು ಹಾಕದೆ ಇದ್ದರೂ ಸಹ ನಾವು ಅದನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ನಿಶಾನೆ ಡಿ 22 ರ ಆಧಾರದ ಮೇಲೆ ಯಾವುದೇ ಖಾತಾ ಬದಲಾವಣೆ ಆಗಿಲ್ಲ ಎಂದರೆ

ಸರಿಯಲ್ಲ. ಸಾಧ್ಯವಾದರೆ ದಾವಾ ಆಸ್ತಿಗಳಲ್ಲಿ ವಾದಿಗೆ ಪಾಲು ನೀಡುವುದನ್ನು ತಪ್ಪಿಸುವ ಸಲುವಾಗಿ ನಿಶಾನೆ ಡಿ 22 ರಲ್ಲಿನ ದಾಖಲೆಯನ್ನು ಇತ್ತೀಚೆಗೆ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಹಾಗೆಯೇ ನಿಶಾನೆ ಡಿ 1 ರಲ್ಲಿನ ಹಕ್ಕು ಖುಲಾಸೆ ಪತ್ರದ ಯಾವುದೇ ಸಂಗತಿಗಳು ಸಹ ವಾದಿಗೆ ತಿಳಿಯದೆ ಇದ್ದರೂ ಸಹ ಬೇರೆ ಯಾವುದೋ ಪತ್ರಕ್ಕೆ ಸಹಿಹಾಕಿಸಿಕೊಳ್ಳುವ ನೆಪ ಹೇಳಿ ಆ ಪತ್ರವನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ.

ನಿಶಾನೆ ಡಿ 10 ರಲ್ಲಿನ ದಾಖಲೆಯು ಪಾಂಡವಪುರದ ಸರ್ವೆ ನಂ. 63/2 ಬಿ ರಲ್ಲಿನ ಪೆಟ್ರೋಲ್ ಬಂಕ್ ಗೆ ಸಂಬಂಧಿಸಿದ ದಾಖಲೆಯಾಗಿದೆ. 1986 ರ ಪಾಲುಪಟ್ಟಿಯಲ್ಲಿ ಈ ಸ್ವತ್ತು ನಮ್ಮ ತಂದೆಯ ಹೆಸರಿಗೆ ಬಂದ ನಂತರ ಪೆಟ್ರೋಲ್ ಬಂಕ್ ಸ್ಥಾಪಿಸಲು ಸಾಲ ಪಡೆಯಲು ಹೋದಾಗ ಕಂಪನಿಯವರು ನಮ್ಮ ತಂದೆಯ ತಮ್ಮಂದಿರ ಸಹಿಯು ಬೇಕು ಎಂದು ಹೇಳಿದ ಕಾರಣ ನಿಶಾನೆ ಡಿ 10 ರ ರೀತ್ಯಾ ಹಕ್ಕು ಖುಲಾಸೆ ಪತ್ರವನ್ನು ಬರೆಸಿಕೊಳ್ಳಲಾಗಿದೆ. ಈ ಸಂಗತಿಯನ್ನು ನಿಶಾನೆ ಡಿ 10 ರಲ್ಲಿ ಹೇಳಿಲ್ಲ. 1984 ಮತ್ತು 1986 ರಲ್ಲಿ ನಮ್ಮ ತಂದೆ, ಚಿಕ್ಕಪ್ಪಂದಿರು, ಅಜ್ಜಿ ಮತ್ತು ತಾತ ಇವರುಗಳ ನಡುವೆ ಯಾವುದೇ ವಿಭಾಗ ಆಗದೆ ಅದಕ್ಕಿಂತ ಮೊದಲೇ ಮೌಖಿಕ ವಿಭಾಗ ಆಗಿದ್ದರೂ ಸಹ ನಾವು ದಾಖಲೆಗಳನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಮೌಖಿಕ ವಿಭಾಗವಾಗಿದ್ದರೂ ಸಹ ನಮ್ಮ ತಂದೆಯು ತಮ್ಮ ಅನುಕೂಲಕ್ಕೆ ತಕ್ಕ ಹಾಗೆ ವಾದಿಯ ಗಮನಕ್ಕೆ ಬಾರದಂತೆ ನಿಶಾನೆ ಡಿ 10 ನ್ನು ಸೃಷ್ಟಿ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. 1986 ರಲ್ಲಿ ಆ ಸ್ವತ್ತು ನಮ್ಮ ತಂದೆಗೆ ಬಂದಿದ್ದೆ ಆಗಿದಿದ್ದರೆ ಆ ಸಂಗತಿಯನ್ನು ನಿಶಾನೆ ಡಿ 10 ರಲ್ಲಿ ಹೇಳುತ್ತಿದ್ದರು ಎಂದರೆ ಸರಿಯಲ್ಲ. ನಿಶಾನೆ ಡಿ 1 ಮತ್ತು 10 ರಲ್ಲಿರುವ ದಾಖಲೆಗಳಲ್ಲಿನ ಸಂಗತಿಗಳು ವಾದಿಯ ಅರಿವಿಗೆ ಇರದೆ ಇದ್ದರೂ ಸಹ ನಮ್ಮ ತಂದೆಯು ಅವುಗಳನ್ನು ಸೃಷ್ಟಿ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ನಮ್ಮ ಅಜ್ಜ ಮತ್ತು ಅಜ್ಜಿಯ ಅಜ್ಜಪಾಲು ಆಗಿದ್ದು ಅವರ ಮರಣಾ ನಂತರ ಎಲ್ಲಾ ಮಕ್ಕಳಿಗೂ ಸಮನಾಗಿ ಹಂಚಿಕೆಯಾಗಬೇಕು ಎಂದು ಬಹಳ ಹಿಂದೆಯೇ ತೀರ್ಮಾನವಾಗಿತ್ತು ಎಂದರೆ ಸರಿಯಲ್ಲ. ನಮ್ಮ ಕುಟುಂಬದಲ್ಲಿ ನಮ್ಮ

ತಂದೆ ಮತ್ತು ನನ್ನ ಚಿಕ್ಕಪ್ಪ ನಾಗರಾಜೇಗೌಡ ಬುದ್ದಿವಂತರಾಗಿರುವ ಕಾರಣ ನಮ್ಮ ಅನುಕೂಲಕ್ಕೆ ತಕ್ಕ ಹಾಗೆ ದಾಖಲೆಗಳನ್ನು ಸೃಷ್ಟಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನನ್ನ ಅಜ್ಜಿ ತೀರಿಕೊಂಡ ನಂತರ ವಾದಿಯು ಖಾತಾ ಬದಲಾವಣೆಗೆ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. ಆಗ ನನ್ನ ತಾಯಿ ತಕರಾರು ಸಲ್ಲಿಸಿದ್ದರು ಎಂದರೆ ಸರಿ. ನಮ್ಮ ಕುಟುಂಬದಲ್ಲಿ ನಡೆದಿರುವ ಎಲ್ಲಾ ವಿಚಾರಗಳು ನನ್ನ ತಾಯಿಗೆ ಗೊತ್ತಿವೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ನಮ್ಮೆಲ್ಲರ ಪರವಾಗಿ ನನ್ನ ತಾಯಿ ತಕರಾರು ಸಲ್ಲಿಸಿದ್ದರು ಎಂದರೆ ಸರಿ. ಈ ದಾವೆ ಸಲ್ಲಿಸಿದ ನಂತರ ಆ ರೀತಿ ತಕರಾರು ಸಲ್ಲಿಸಿದ್ದಾರೆ ಎಂದರೆ ಸರಿ. 1984 ರ ಪಾಲುಪಟ್ಟಿ ಅಥವಾ 1986 ರ ಪಾಲುಪಟ್ಟಿ ಪ್ರಕಾರ ಆಸ್ತಿ ನಮಗೆ ಸೇರಬೇಕೆಂದು ನಮ್ಮ ತಾಯಿ ಆ ತಕರಾರಿನಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. ನಮ್ಮ ತಾಯಿ ಆ ರೀತಿ ಹೇಳದೆ ಇದ್ದರೂ ಸಹ ಹೇಳಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಇತ್ತೀಚೆಗೆ ನಮ್ಮ ಹಾಗೂ ವಾದಿಯ ನಡುವೆ ಉದ್ಭವಿಸಿದ ಭಿನ್ನಾಭಿಪ್ರಾಯದ ಕಾರಣದಿಂದ ಅವರಿಗೆ ದಾವಾ ಆಸ್ತಿಗಳಲ್ಲಿ ಪಾಲು ನೀಡಬಾರದು ಎಂಬ ಉದ್ದೇಶದಿಂದ ನನ್ನ ಪ್ರತಿವಾದ ಪತ್ರ, ಮತ್ತು ಮುಖ್ಯ ವಿಚಾರಣಾ ಪ್ರಮಾಣಪತ್ರಿಕೆಯಲ್ಲಿನ ಎಲ್ಲಾ ಸಂಗತಿಗಳನ್ನು ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ.ಪಾಲುಪಟ್ಟಿಗಳ ಪ್ರಕಾರ ಇಂತಿಂತವರಿಗೆ ಇಂತಿಂತಹ ಆಸ್ತಿಗಳು ಹೋಗಿವೆಎಂದು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರಿಕೆಯಲ್ಲಿ ಹೇಳಿರುವ ಸಂಗತಿಯು ಸುಳ್ಳಾಗಿದ್ದು ಆ ಆಸ್ತಿಗಳು ಮೌಖಿಕವಾಗಿ ಹಾಗೆ ಹೋಗಿವೆ ಎಂದರೆ ಸರಿಯಲ್ಲ. ಭೋಗ್ಯಕ್ಕೆ ನೀಡಿರುವ ದಾವಾ ಆಸ್ತಿ ಐಟಂ ನಂ.3 ರ ಸ್ವತ್ತು ನಮ್ಮ ಚಿಕ್ಕಪ್ಪನ ಹಿಸ್ಸೆಗೆ ಹೋಗಿದೆ ಎಂದು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರಿಕೆಯಲ್ಲಿ ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಇಂದಿಗೂ ಸಹ ನಮ್ಮ 3 ಜನ ಅಣ್ಣ ತಮ್ಮಂದಿರ ಜಂಟಿ ಸ್ವಾಧೀನಾನುಭವದಲ್ಲಿ ಇದ್ದು ಅವುಗಳ ಮೇಲೆ ಎಲ್ಲರಿಗೂ ಸಮಾನ ಹಕ್ಕು ಇದೆ ಎಂದರೆ ಸರಿಯಲ್ಲ. ಸಾಧ್ಯವಾದರೆ ವಾದಿಗೆ ದಾವಾ ಆಸ್ತಿಗಳಲ್ಲಿನ ಭಾಗಾಂಶದ ಹಕ್ಕು ತಪ್ಪಿಸಲು ಸುಳ್ಳು ಸಂಗತಿಗಳ ಆಧಾರದ ಮೇಲೆ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ದಾವಾ ಆಸ್ತಿ ಐಟಂ ನಂ.1 ರಲ್ಲಿ 0.24 ಗುಂಟೆ ಜಮೀನು ಭೂಸ್ವಾಧೀನಗೊಂಡಿದ್ದು ಅದರ ಪರಿಹಾರದ

ಹಣದಲ್ಲಿ ಪಾಲು ಪಡೆಯಲು ವಾದಿಯು ಅರ್ಹರಾಗಿದ್ದಾರೆ  ಎಂದರೆ ಸರಿಯಲ್ಲ. ಯಾರ ಹೆಸರಿನಲ್ಲಿನ 0.24 ಗುಂಟೆ ಜಮೀನು ಭೂಸ್ವಾಧೀನಗೊಂಡಿದೆ ಎಂದು ತಿಳಿದುಕೊಳ್ಳಲು ನ್ಯಾಯಾಲಯದಿಂದ ನಿಯೋಗಿಯನ್ನು ನೇಮಕ ಮಾಡಲು ನನ್ನ ಅಭ್ಯಂತರವೇನು ಇಲ್ಲ.

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)**

**ಸಾ ಓ ಹೇ  ಸ ಒ**

**(ಬಾಬು ಎನ್)**
**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಪಾಂಡವಪುರ**